# ಹಂದ್ರಾಳರ ಕಥೆಗಳಲ್ಲಿ ಗ್ರಾಮ ಸಂಸ್ಕೃತಿ

ನರಸಿಂಹ ಎಸ್.ಎನ್.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ದಯಾನಂದ ಸಾಗರ್ ವಿಶ್ವವಿದ್ಯಾಲಯ, ಕುಡ್ಲು ಗೇಟ್, ಹೊಸೂರು ರಸ್ತೆ, ಬೆಂಗಳೂರು.

DOI: https://doi.org/10.5281/zenodo.18770628

**ABSTRACT:**

ಕನ್ನಡದ ಪ್ರಮುಖ ಕಥೆಗಾರರಾದ ಕೇಶವರೆಡ್ಡಿ ಹಂದ್ರಾಳರ ಸಾಹಿತ್ಯದಲ್ಲಿ ಗ್ರಾಮೀಣ ಸಂಸ್ಕೃತಿಯ ಅನನ್ಯತೆ ಮತ್ತು ಸಂಕೀರ್ಣತೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಹಂದ್ರಾಳರು ಬಂಡಾಯ-ದಲಿತ ಸಂವೇದನೆಯ ಹಿನ್ನೆಲೆಯಲ್ಲಿ ಗ್ರಾಮೀಣ ಬದುಕಿನ ವಾಸ್ತವ, ಮೌಖಿಕ ಪರಂಪರೆ, ವಿವಾಹ ಪದ್ಧತಿಗಳು ಹಾಗೂ ಆಚರಣೆಗಳನ್ನು ತಮ್ಮ ಕಥೆಗಳಲ್ಲಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಸ್ವಾತಂತ್ರ್ಯ ನಂತರದ ಭಾರತದ ಗ್ರಾಮೀಣ ಸ್ಥಿತ್ಯಂತರಗಳು, ರಾಜಕೀಯ ದಬ್ಬಾಳಿಕೆ ಹಾಗೂ ಜಾಗತೀಕರಣದ ಅಡಿಯಲ್ಲಿ ನಶಿಸುತ್ತಿರುವ ಮಾನವೀಯ ಸಂಬಂಧಗಳನ್ನು ಇವರ ಕಥೆಗಳು ಪ್ರತಿರೋಧದ ನೆಲೆಯಲ್ಲಿ ಚಿತ್ರಿಸುತ್ತವೆ. ಮಾಸ್ತಿ, ಕುವೆಂಪು ಮತ್ತು ಕಾರಂತರ ಪರಂಪರೆಯನ್ನು ಮುಂದುವರಿಸುವ ಹಂದ್ರಾಳರು, ಹಳ್ಳಿಯ ಬದುಕು ಮತ್ತು ನಗರ ಸಂಸ್ಕೃತಿಗಳ ನಡುವಿನ ಕೊಂಡಿಯನ್ನು ಗುರುತಿಸುತ್ತಾ, ಶೋಷಿತರ ಧ್ವನಿಯಾಗಿ ಹೇಗೆ ಹೊರಹೊಮ್ಮಿದ್ದಾರೆ ಎಂಬುದರ ಕುರಿತು ಇಲ್ಲಿ ಚರ್ಚಿಸಲಾಗಿದೆ.

**KEYWORDS:**

ಕೇಶವರೆಡ್ಡಿ ಹಂದ್ರಾಳ, ಗ್ರಾಮೀಣ ಸಂಸ್ಕೃತಿ, ಬಂಡಾಯ ಸಾಹಿತ್ಯ, ಜಾಗತೀಕರಣ, ಮೌಖಿಕ ಪರಂಪರೆ.

ಕೇಶವರೆಡ್ಡಿ ಹಂದ್ರಾಳರು ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದವರಾಗಿದ್ದು ಹಂದ್ರಾಳ ಎಂಬ ಗ್ರಾಮದಲ್ಲಿ ಅವರ ಜನನ. ಹಂದ್ರಾಳರು ಜನಪ್ರಿಯ ಶೈಲಿಯ ಕಥೆಗಾರರಾಗಿ ಬದುಕಿನ ಕಠೋರ ಸತ್ಯಗಳಿಗೆ ಮುಖಾಮುಖಿಯಾಗಿ ಕತೆಗಳನ್ನು ಬರೆದಿದ್ದಾರೆ. ಸಿಜಿಕೆ ಮತ್ತು ಬೆಸಗರಹಳ್ಳಿ ರಾಮಣ್ಣನವರನ್ನು ತಮ್ಮ ಮಾನಸ ಗುರುಗಳೆಂದು ನಂಬಿರುವ ಹಂದ್ರಾಳರು ಅವರಿಬ್ಬರೂ ಬದುಕಿರುವ, ಸೃಜನಶೀಲತೆಗಳ ಪ್ರಮುಖ ಚಾಲನೆಯಲ್ಲಿದ್ದವರು. ಬಂಡಾಯ–ದಲಿತ ಬರವಣಿಗೆ ಕಳೆದ ದಶಕದ ಕಥಾಕ್ಷೇತ್ರದ ಹೊಚ್ಚಹೊಸ ಬೆಳವಣಿಗೆ. ಮಾರ್ಕ್ಸ್ವಾದ, ಲೋಹಿಯಾವಾದ, ಅಂಬೇಡ್ಕರ್ ವಾದಗಳು ಮುಪ್ಪರಿಗೊಂಡು ಬೆಳೆಯುತ್ತಿರುವ ಈ ಚಳುವಳಿಯಲ್ಲಿ ಕೆಳಸ್ತರದ ಜಾತಿವರ್ಗಗಳ ಶೋಷಿತ ಜನರ ಪ್ರತಿಭಟನೆಯ ಧ್ವನಿ ಉದ್ಘೋಷಿಸುತ್ತದೆ. ಇದರ ಮುಖ್ಯ ಕಥೆಗಾರರು ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕುಂ. ವೀರಭದ್ರಪ್ಪ, ಬರಗೂರು ರಾಮಚಂದ್ರಪ್ಪ, ಸುಧಾಕರ, ಶಾಂತರಸ, ಚೆನ್ನಣ್ಣ ವಾಲಿಕಾರರು. ಮಾನವತೆಯನ್ನು ಕುಂಠಿಸುವ ವ್ಯವಸ್ಥೆಯ ವಿರುದ್ಧ ಬೆಸಗರಹಳ್ಳಿಯ ಕತೆಗಳು ಹಾಗೂ ಹಂದ್ರಾಳರ ಕತೆಗಳು ಸಿಡಿಯುತ್ತವೆ. ಅಂತರ್ಜಾತೀಯ ಪ್ರೇಮದಿಂದ ಸ್ಥಿತ್ಯಂತರದ ಸಾಧ್ಯತೆಯ ಭವಿಷ್ಯವನ್ನು ನಾಗವಾರರು ಕಾಣುತ್ತಾರೆ. ವೀರಭದ್ರಪ್ಪನವರ ಪ್ರತಿಭಟನೆಯ ಪ್ರಚಂಡ ಶಕ್ತಿ ಒಮ್ಮೊಮ್ಮೆ ಪ್ರತಿಹಿಂಸೆಯವರೆಗೂ ಪ್ರಸರಿಸುತ್ತದೆ. ಹಾಗೆಯೇ ಹಂದ್ರಾಳರ ಕಥೆಗಳು ಗ್ರಾಮ ಸಂಸ್ಕೃತಿಯನ್ನು ಎತ್ತಿ ಹಿಡಿಯುವಲ್ಲಿ ಕೆಲಸವನ್ನು ಮಾಡುತ್ತದೆ.

ಹಂದ್ರಾಳರ ಸಣ್ಣಕತೆಗಳಲ್ಲಿ ಕಂಡುಬರುವ ಗ್ರಾಮ ಜೀವನದ ವೈವಿಧ್ಯಗಳು ಅಚ್ಚರಿಗೊಳಿಸುವಂತವು. ಜೀವನದಲ್ಲಿ ತಮ್ಮ ಗಮನಕ್ಕೆ ಬಂದಿರಬಹುದಾದ ಜನರ, ತಾವೇ ಕಲ್ಪಿಸಿಕೊಳ್ಳುವ ವ್ಯಕ್ತಿಗಳ ಸ್ವಭಾವಗಳ ಮೇಲ್ನೋಟದ ಸರಳತೆ ಹಾಗೂ ಆಳದ ಸಂಕೀರ್ಣತೆಗಳು ಸೂಚಿತವಾಗುವಂತೆ ಅವರನ್ನು ಚಿತ್ರಿಸುವಂತೆಯೇ, ಚಾರಿತ್ರಕ ವ್ಯಕ್ತಿಗಳ, ಅವರಲ್ಲಿಯೂ ಮಹಾನ್ ಸಾಹಿತಿಗಳ ಹಾಗೂ ಅವರ ಕಥಾ ಸಾಹಿತ್ಯದ ಜನಪ್ರಿಯ ಪಾತ್ರಗಳ ಸ್ವಭಾವಗಳನ್ನು ಕೂಲಂಕುಷವಾಗಿ ಗ್ರಹಿಸಿ, ಅವರನ್ನೂ ಆ ಪಾತ್ರಗಳನ್ನೂ ವಾಸ್ತವಿಕ ಎನ್ನುವಂತೆ ಸುಸಂಗತವಾಗಿಯೂ, ಸುಂದರವಾಗಿಯೂ ಹಂದ್ರಾಳರು ತಮ್ಮ ಕತೆಗಳಲ್ಲಿ ಕಡೆದಿರುತ್ತಾರೆ.

ಭಾರತದ ಶ್ರೇಷ್ಠ ಸಾಹಿತಿಗಳಲ್ಲಿ ಕೆಲವರ ಜೀವನ ಚರಿತ್ರೆಗಳಲ್ಲಿ ಲಭ್ಯವಾಗುವ ಕೆಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು, ಉಳಿದವುಗಳನ್ನು ತಮ್ಮ ಸುತ್ತಮುತ್ತಲಿನ ಪರಿಸರದ ಶಕ್ತಿಯಿಂದ, ಸುಸಂಬದ್ಧವಾಗುವಂತೆ ನೈಜವಾಗಿ ಚಿತ್ರಿಸುತ್ತಾ ಹೋಗುತ್ತಾರೆ. ಅವರ ವಿಶ್ವಸನೀಯ ವ್ಯಕ್ತಿಚಿತ್ರಗಳನ್ನು ತಮ್ಮ ಕೆಲವು ಕಥೆಗಳಲ್ಲಿ ಹಂದ್ರಾಳರು ನೀಡುತ್ತಾರೆ. ಇಂಥ ಚಿತ್ರಗಳ ವೈಶಿಷ್ಟ್ಯವೆಂದರೆ ಭಾರತೀಯ ಸಾಹಿತಿಗಳನ್ನು ನೆನಪಿಸುವಾಗಲೂ ಅವರ ವ್ಯಕ್ತಿತ್ವಕ್ಕೆ ಸುಸಂಗತವಾಗುವಂತೆಯೂ ಹೀಗಿದ್ದೂ ಕನ್ನಡಿಗ ಎಂದೇ ನಾವು ಭಾವಿಸಬಹುದಾದ ತಮ್ಮದೇ ದೃಷ್ಟಿಕೋನದಿಂದ ಅವರನ್ನು ವೀಕ್ಷಿಸುತ್ತಿರುವಂತೆಯೂ ಹಂದ್ರಾಳರು ತಮ್ಮ ಕತೆಗಳಲ್ಲಿ ಚಿತ್ರಿಸುತ್ತಾರೆ. ಇದು ಹಂದ್ರಾಳರವರ ಸ್ವೋಪಜ್ಞತೆಯ ದ್ಯೋತಕವಾಗಿರುವಂತೆ ಗ್ರಾಮೀಣ ಸಂಸ್ಕೃತಿಗಳು

ಹಾಗೂ ನಗರಗಳ ಸಾಮರಸ್ಯದ ಕಡೆಗೆ ಅವುಗಳ ಹಿನ್ನೆಲೆಯ ಜಾಗತಿಕ ಮೂಲಭೂತ ಮಾನವೀಯತೆಯ ಸಮಾನ ಧರ್ಮದ ಕಡೆಗೂ ನಮ್ಮ ಗಮನ ಸೆಳೆಯುತ್ತದೆ. ತಮಗೇ ವಿಶಿಷ್ಟವಾದ ಮನೋಧರ್ಮವನ್ನೂ ಜೀವನ ದರ್ಶನವನ್ನೂ ಪ್ರಕಟಿಸುವ ಇಂಥ ಕತೆಗಳೂ ಅವರ ಇತರ ಕತೆಗಳೊಡನೆ ಸಮರಸವಾಗಿ ಕೂಡಿಕೊಳ್ಳುವುದು ಹಂದ್ರಾಳರ ಅಸಾಧಾರಣ ಪ್ರತಿಭೆಯ ಮೇಲೆ ಬೆಳಕು ಚೆಲ್ಲುತ್ತದೆ.

ಗ್ರಾಮ ಸಂಸ್ಕೃತಿಯನ್ನು ಅದರ ಪ್ರಸ್ತುತ ಹಾಗೂ ಪ್ರಾದೇಶಿಕ ರೂಪಾಂತರಗಳೊಡನೆ ಆಳವಾಗಿ ಅಧ್ಯಯನ ಮಾಡಿ ಹಾಗೂ ಹಳ್ಳಿಯ ಸ್ಥಿತಿಗತಿಗಳನ್ನು ತಿಳಿದು ಅದನ್ನು ತಮ್ಮ ಜೀವನದಲ್ಲಿಯೂ ರೂಢಿಸಿಕೊಂಡಿದ್ದ ಹಂದ್ರಾಳರು ಭಾರತೀಯ ಹಾಗೂ ಕರ್ನಾಟಕದ ಗ್ರಾಮೀಣ ಸಂಸ್ಕೃತಿಯ ವಕ್ತಾರರಾಗಲು ಹೆಚ್ಚು ಸಮರ್ಥರು ಎಂದು ಭಾವಿಸಬಹುದು. ನಮ್ಮ ಶ್ರೇಷ್ಠ ಕತೆಗಾರರಲ್ಲೊಬ್ಬರಾದ ಹಂದ್ರಾಳರು ಗ್ರಾಮೀಣ ಸಂಸ್ಕೃತಿಯ ಸಾರವನ್ನೇ ತಮ್ಮ ಕತೆಗಳಲ್ಲಿ ಭಟ್ಟಿ ಇಳಿಸಿದ್ದಾರೆ. ಅವರ ಆಸಕ್ತಿ, ವಿದ್ವತ್ತು ಮತ್ತು ಸಾಹಿತ್ಯ ಸೃಷ್ಟಿ ಕತೆಯ ಕ್ಷೇತ್ರದಲ್ಲಿ ಸೈ ಎನ್ನಿಸಿಕೊಂಡವರು ಈ ಹಂದ್ರಾಳರು. ಗ್ರಾಮೀಣ ಸಂಸ್ಕೃತಿಯ ಉಪನ್ಯಾಸಗಳಲ್ಲಿ ಅವರು ಮೊದಲು ಸಂಸ್ಕೃತಿಯ ಸ್ವರೂಪವನ್ನು ಬಿತ್ತರಿಸಿ ಬಳಿಕ ನಗರ ಸಂಸ್ಕೃತಿಗಳೂ, ಶಿಷ್ಟ–ಪಾಮರ ಸಂಸ್ಕೃತಿಗಳೂ ಅಭಿನ್ನವೆಂದು ವಾದಿಸಿ, ಗ್ರಾಮೀಣ ಸಂಸ್ಕೃತಿಯು ಪ್ರಕಾಶಗೊಳ್ಳುವ ಹಾಡು, ಕತೆ, ಗಾದೆ, ಒಗಟು ಇತ್ಯಾದಿ ಮೌಖಿಕ ಸಾಹಿತ್ಯ ಪ್ರಕಾರಗಳಿಂದಲೂ ವಿವಿಧ ಪದ್ಧತಿ ಆಚಾರಗಳಿಂದಲೂ ನಿದರ್ಶನಗಳನ್ನು ನೀಡುತ್ತ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. ನಮ್ಮ ಮೌಖಿಕ ಸಾಹಿತ್ಯದ ಉದಾಹರಣೆಗಳು ಹಾಗೂ ಪ್ರಾಚೀನ ಸಾಹಿತ್ಯ ಮತ್ತು ಆಚಾರ ವಿಚಾರಗಳು ಇವುಗಳಿಂದ ಅವರು ಎತ್ತಿ ತೋರಿಸುವ ಅವುಗಳ ಪರ್ಯಾಯ ಉಲ್ಲೇಖಗಳನ್ನು ನೋಡಬಹುದು.

ಪಾಶ್ಚಾತ್ಯ ವಿದ್ವಾಂಸರು ಜನತೆಯ ಸಂಸ್ಕೃತಿಯನ್ನು ನಿರ್ದೇಶಿಸುತ್ತಾ ನಾಗರಿಕ ಜನಾಂಗದ ಅಪಂಡಿತ ಕುಲಗಳಲ್ಲಿ ಕಾಣಸಿಗುವ ಪರಂಪರಾ ಪ್ರಾಪ್ತವಾದ ತಿಳಿವು, ಅರಿವು, ಅದೇ ಜನತೆಯ ಸಂಸ್ಕೃತಿ ಎಂದು ಅದನ್ನು ಒಂದು ವಿಶಿಷ್ಟ ರೂಪವನ್ನಾಗಿ ವಿಂಗಡಿಸುತ್ತಾರೆ. ನಾಗರಿಕ–ಗ್ರಾಮೀಣ, ಶಿಷ್ಟ–ಅನಕ್ಷರಸ್ಥ, ಪಂಡಿತ–ಪಾಮರ ಇಂಥ ಭೇದವು ಹಂದ್ರಾಳರಿಗೆ ಒಪ್ಪಿಗೆಯಾಗುವುದಿಲ್ಲ. ಗ್ರಾಮೀಣದಲ್ಲಿ ಈ ಕೊನೆಯಿಂದ ಆ ಕೊನೆಯವರೆಗೆ ಕಂಠಪಾಠ ಮಾಡಿರುವ ನಿರಕ್ಷರರಿದ್ದಾರೆ. ಚಿಟಿಕೆ ಹೊಡೆಯುವಷ್ಟು ಹೊತ್ತಿನಲ್ಲಿ ಹಾಡು ಲಾವಣಿಗಳನ್ನು ಕಟ್ಟಬಲ್ಲ ಪಾಮರರಿದ್ದಾರೆ, ಸಾವಿರಾರು ನುಡಿಯ ಹಾಡುಗಳು ಇಪ್ಪತ್ತು ಮೂವತ್ತನ್ನು ನಿರಾಯಾಸವಾಗಿ ಚಾಚೂ ತಪ್ಪಿಲ್ಲದೆ, ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳುವ ಹೆಣ್ಣು ಹೆಂಗಸರಿದ್ದಾರೆ. ಹೆಸರಾದ ಡಾಕ್ಟರುಗಳು ಕೈಬಿಟ್ಟ ವ್ಯಾಧಿಯನ್ನು ಚುಟುಕು ಮಂತ್ರಮೂಲಿಕೆಗಳಿಂದ ಗುಣಪಡಿಸಬಲ್ಲ ತಜ್ಞರಿದ್ದಾರೆ.

ಸೂರ್ಯ ನಮಸ್ಕಾರ ವೈದಿಕವೂ ಹೌದು, ಗ್ರಾಮೀಣದಲ್ಲಿಯೂ ಈ ಆಚರಣೆ ಇದೆ. ವಿಧಿವಿಲಾಸವನ್ನು ಎಲ್ಲರೂ 'ಹಣೆಯ ಬರಹ' ಎಂದೇ ರೂಢಿಯಾಗಿ ಹೇಳಿಕೊಳ್ಳುತ್ತೇವೆ. ವಿವಾಹ ವಿಧಿಗಳಲ್ಲಿಯೂ ಗ್ರಾಮೀಣ ಸಂಸ್ಕೃತಿಯು ಹೇಗೆ ವೈದಿಕ

ಸಂಸ್ಕೃತಿಯ ರೂಪಾಂತರ, ಪ್ರತಿಬಿಂಬ ಎಂಬುದನ್ನು ಕಾಣುತ್ತೇವೆ. 'ವೀಳ್ಯದ ಶಾಸ್ತ್ರ' ನಿಶ್ಚಿತಾರ್ಥ, ಚಪ್ಪರ, ವಿವಾಹ ಮಂಟಪ ಕಟ್ಟುವಿಕೆ, ಧಾರೆ, ಕನ್ಯಾದಾನ, ಸೇಸೆಯಲ್ಲಿ ಕನ್ಯೆಯರು ಪರಸ್ಪರವಾಗಿ ಅಕ್ಷತೆಯಿಂದ ಅರ್ಚಿಸುವರು, ಭೂಮ, ನವದಂಪತಿಗಳು ಒಟ್ಟಿಗೆ ಮಾಡುವ ಭೋಜನ, ಕುಂಕುಮದ ನೀರು ತುಂಬಿದ ಕಳಶಗಳನ್ನು ಹೂಡುವುದು, ನಾಗವಲಿ, ಗದ್ದುಗೆ, ತಾಂಬೂಲ, ಚರ್ವಣ, ವಿವಾಹದ ಮುಖ್ಯಾಂಗವಾಗಿದೆ. ಮಾಂಗಲ್ಯಧಾರಣ, ಹಲವು ಜಾತಿಗಳಲ್ಲಿದ್ದ ಬಸವಿ ಬಿಡುವ ಸಂಪ್ರದಾಯವೂ ವೇದಗಳ ಕಡೆಯಿಂದ ಬಂದಿರಬಹುದು ಎಂಬ ಊಹೆಯೂ ಸಾಧ್ಯ. ಏಕೆಂದರೆ ಕಾನೀನ ಪುತ್ರ ಪದ್ಧತಿಯನ್ನು ಇದು ಹೋಲುತ್ತದೆ. ಮಕ್ಕಳ ಆಟಗಳನ್ನು ಪರಿಶೀಲಿಸಬಹುದು. 'ಸ್ವಾದಿಷ್ಟಯ್ಯ ಮಾದಿಪ್ಪಯ್ಯ ಮತ್ತಿಷ್ಟು ತುಪ್ಪ ಹಾಕಯ್ಯ, ಹಾಕಯ್ಯ' ಎಂದು ಕೆನ್ನೆಗಳನ್ನು ಹಿಡಿದು ಮಗುವನ್ನು ಹಿಂದಕ್ಕೆ ಮುಂದಕ್ಕೆ ಜೂಗಾಡಿಸುವುದು. ಈಗಿನ ಹೆಂಗಸು ಗಂಡಸರ ಉಡುಗೆ ತೊಡುಗೆಗಳನ್ನು ವೇದಕಾಲೀನ ಹಳ್ಳಿಯ ಹೆಂಗಸರು ಕಟ್ಟುವ ತುರುಬ, ಅವರು ಸೊಪ್ಪು ಸೆದೆಗಳನ್ನು ತುರುಕಿಕೊಳ್ಳುವುದಕ್ಕಾಗಿ ಮಗ್ಗುಲಾಗಿ ಕಟ್ಟುವ ಮಡಿಲು, ಅವರುಡುವ ಸೀರೆ, ಗಂಡಸರುಡುವ ಧೋತರ ದಟ್ಟಿ, ಕಠಾರಿ ಕಚ್ಚೆಧೋತರ, ಬಣ್ಣದ ತಲೆಸುತ್ತು, ಪಾಗುಗಳು, ಇವೆಲ್ಲ ವೇದದ ಕಾಲದವು. ಅಷ್ಟೆ ಅಲ್ಲ ಹಳ್ಳಿಯ ಕಾಲದ ತೊಟ್ಟಿಯ ಮನೆಗಳು, ನಮ್ಮ ಮನೆಗಳಲ್ಲಿರುವ ಹಳೆಯ ಮಂಚ, ಕಾಲುಮಣಿ, ಮಣೆ, ಚಾಪೆಗಳು ವೇದಗಳ ಕಾಲದಲ್ಲಿದ್ದ ಜನರು ಉಪಯೋಗಿಸುತ್ತಿದ್ದವು.

"ಪತ್ರಿಕೆಗಳಿಗೆ ನಿಯತಕಾಲಿಕವಾಗಿ ಕಥೆಗಳನ್ನು ಬರೆಯುವುದರ ಮೂಲಕ ಜನಪ್ರಿಯರಾಗಿರುವ ಕೇಶವರೆಡ್ಡಿ ಹಂದ್ರಾಳರು 'ಜನಪ್ರಿಯ'ವೆಂಬ ಹಣೆಪಟ್ಟಿಯ ಸೂತ್ರಕ್ಕಿಂತ ಭಿನ್ನವಾದ 'ಗಂಭೀರ' ಕಥಾ ರಚನೆಯ ರೀತಿಯಲ್ಲಿಯೇ 'ಜನಪ್ರಿಯ' ಅಂಶಗಳನ್ನು ರೂಢಿಸಲೆತ್ನಿಸಿದವರು. ಹಂದ್ರಾಳರು ಮೂಲತಃ ಗ್ರಾಮೀಣ ಪರಿಸರ ಸಂವೇದನೆಯಲ್ಲಿ ಬೆಳೆದವರಾದರೂ ಆಮೇಲೆ ಅದಕ್ಕೆ ಆಧುನಿಕ ಸಂವೇದನೆ, ಸಂಕೀರ್ಣತೆ-ಸಿದ್ಧಾಂತಗಳ ಹೊಳಪನ್ನು ಸೇರಿಸಿಕೊಂಡವರು. ಗ್ರಾಮೀಣ ಬದುಕೇ ಅವರ ಬಹುತೇಕ ಕಥೆಗಳ ವಸ್ತುವಾಗಿದ್ದರೂ ಅವರದು ಪ್ರಸಂಗ ಆಧಾರಿತ ಕಥನ ಅಲ್ಲ. ಇದಕ್ಕೆ ಅವರ ಆಧುನಿಕ ಸಂವೇದನೆ, ವಿಸ್ತಾರವಾದ ಅನುಭವ ಮತ್ತು ಸೈದ್ಧಾಂತಿಕ ಚಿಂತನೆಗಳೇ ಮುಖ್ಯ ಕಾರಣ. ಹೀಗಾಗಿ ಈ ತೆರದ ಸಂವೇದನೆ ಮತ್ತು ಅನುಭವಗಳೇ ಅವರ ಕಥಾ ಸಂವಿಧಾನದ ಹಂದರವನ್ನು ನಿರ್ಧಾರಗೊಳಿಸುತ್ತವೆ. ಹಂದ್ರಾಳರ ಬರವಣಿಗೆಯಲ್ಲಿ ಇರುವ ಆಪ್ತತೆ, ಹಾಗೆಯೇ ಅಬ್ಬರ, ಆರ್ಭಟ, ಅಟಾಟೋಪಗಳಿಲ್ಲದೆ ಸಹಜವಾಗಿ ವಸ್ತುಸ್ಥಿತಿಗೆ ಭಂಗ ತಾರದ ನಿರೂಪಣೆ, ಸಿದ್ಧಾಂತ, ಆದರ್ಶಗಳ ಆಶಯಪೂರಕವಾಗಿ ಕಥಾನಕ್ಕೆ ಕಳೆಕಟ್ಟಿವೆ. ಕಥೆಗಳಿಗೆ ಕಾವ್ಯಾತ್ಮಕ ಚೌಕಟ್ಟನ್ನು ನಿರ್ಮಿಸುತ್ತಾ ಮಾನವೀಯ ಹೃದಯವನ್ನು ಮುಟ್ಟುವುದು ಈ ಕಥೆಗಾರನ ಮುಖ್ಯ ಗುರಿ"[1]

ಹಂದ್ರಾಳರು ಕನ್ನಡ ಕಥಾಸಾಹಿತ್ಯ ಲೋಕಕ್ಕೆ ಕಥೆಗಾರರೆಂದೇ ಪ್ರಸಿದ್ಧರಾಗಿದ್ದಾರೆ. ಸ್ವಾತಂತ್ರ್ಯ ನಂತರದ ಗ್ರಾಮೀಣ ಪ್ರದೇಶದ ಸ್ಥಿತ್ಯಂತರಗಳನ್ನು ತಮ್ಮದೇ ಆದ

ಅನನ್ಯವಾದ ರೀತಿಯಲ್ಲಿ ಕಥನವಾಗಿಸಿದ್ದಾರೆ. ಕಥೆ, ಕಥಾಪ್ರಪಂಚ, ಕಥನಕ್ರಿಯೆ ಪರಸ್ಪರ ಸಂಬಂಧ ಪಡೆದು ಸಂಕಥನವಾಗಿರುವ ಪರಿ ವಿಶಿಷ್ಟವಾಗಿದೆ. ವಸಾಹತ್ತೋತ್ತರ ಹಾಗೂ ಜಾಗತೀಕರಣದ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ಜನರ ಸಂಬಂಧಗಳು, ರಾಜಕೀಯ, ಧಾರ್ಮಿಕ ಸಮಸ್ಯೆಗಳು, ಆರ್ಥಿಕ ಸ್ಥಿತಿಗಳು ಯಾವ ಸ್ವರೂಪದಲ್ಲಿವೆ ಎಂಬುದನ್ನು ತಮ್ಮದೇ ಆದ ಕಥನಗಾರಿಕೆಯಲ್ಲಿ ಹಿಡಿದಿಟ್ಟಿದ್ದಾರೆ. ಕಥೆಗಾರರಾದ ಹಂದ್ರಾಳರು ಹಳ್ಳಿಯ ಚಿತ್ರಗಳಿಗೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ಒಂದು ಸ್ಥಾನವಿದೆ. ಆಧುನಿಕ ಸಾಹಿತ್ಯದ ಬಹಳಷ್ಟು ಲೇಖಕರಿಗೆ ಹಳ್ಳಿಯ ಬದುಕೇ ವಸ್ತು. ಮಾಸ್ತಿ, ಕುವೆಂಪು, ಕಾರಂತ, ಲಂಕೇಶ್, ಅನಂತಮೂರ್ತಿ, ತೇಜಸ್ವಿ, ದೇವನೂರು ಮಹಾದೇವ, ಕುಂ.ವೀರಭದ್ರಪ್ಪ, ಕಾ.ತ.ಚಿಕ್ಕಣ್ಣ ಇವರಿಗೆ ಭಾರತೀಯ ಗ್ರಾಮೀಣ ಪ್ರದೇಶದ ಬದುಕಿನ ಸ್ಥಿತ್ಯಂತರಗಳೇ ವಸ್ತುವಾಗಿದೆ. ಈ ಸಾಲಿಗೆ ಕೇಶವರೆಡ್ಡಿ ಹಂದ್ರಾಳರು ಸೇರುತ್ತಾರೆ.

"ಕೇಶವರೆಡ್ಡಿ ಹಂದ್ರಾಳು ಎಂಥ ಸಾಯಿಲ್ ಕನ್ಸರ್‌ವೇಟರ್ ಎಂದರೆ ಅವರೊಂದಿಗೆ ಮಣ್ಣೆಂದರೆ ಮೂಗು ಮುರಿಯುವವರು ದಿನಗಟ್ಟಲೆ ಒಡನಾಡಬೇಕು. ಮಣ್ಣು ಹಸಿರಿಗೆ ಹಲವು ವ್ಯಾಖ್ಯಾನ ಬರೆಯುವ ಪರಿಯನ್ನು ರೆಡ್ಡಿಯವರಿಂದ ತಿಳಿಯಬೇಕು. ಕಕ್ಕುಲಾತಿಯ ಗೀಜಗನ ಗೂಡಾದ ರೆಡ್ಡಿ ಮಣ್ಣಿನಿಂದ ರೂಪಿತಗೊಂಡಂಥವರೆಂದು ಅರ್ಥವಾಗುವುದು ಆವಾಗಲೇ. ಅವರೆದೆಯೊಳಗೆ ಒಕ್ಕಲ ಒನಪಿನ ನೂರಾರು ನಿರ್ಲಕ್ಷಿತ ಪಾತ್ರಗಳು ಮಣ್ಣುಮಸಿ ಸೆಗಣಿ, ಚಿಂಗುವಾಸನೆ ಬೀರುತ್ತಲೇ ಅವರ ಸೃಜನಶೀಲ ಪ್ರತಿಭೆಗೆ, ಗ್ರಾಮೀಣ ಅನನ್ಯ ಸಂವೇದನೆಗೆ ಕಸುವು ಒದಗಿಸುತ್ತಲೇ ಇರುತ್ತವೆ. ಆ ಜೀವಂತ ಪಾತ್ರಗಳು ರೆಡ್ಡಿಯ ಸೂಕ್ಷ್ಮಗ್ರಾಹಿ ಪಂಚೇಂದ್ರಿಯಗಳ ಮೂಲಕ ನಾಗರಿಕ ಸಮಾಜದೊಂದಿಗೆ ಕ್ಯಾತೆ ತೆಗೆಯುತ್ತಲೆ ಇರುತ್ತವೆ. ಕನ್ನಡದ ಸ್ವಯಂಘೋಷಿತ ಅಥವಾ ಶ್ರೇಷ್ಠ ಲೇಖಕರು ಕಲಿಸದಿರುವ ಎಷ್ಟೋ ನಿಗೂಢ, ಜ್ವಲಂತ ಸತ್ಯಗಳನ್ನು ರೆಡ್ಡಿಯವರ ಮೂಲಕ ಹೊರಹಾಕುತ್ತಲೇ ಇರುತ್ತವೆ. ಆದ್ದರಿಂದಲೇ ನಾನು ರೆಡ್ಡಿಯವರಂಥ ಕಥನ ಪ್ರತಿಭೆಗಳನ್ನು ಕುರುಚಲು ಕಾಡುಗಳಿಗೆ ಹೋಲಿಸುವುದು. ಉದ್ಯಾನವನಗಳಿಗಿಂತ ಮುಖ್ಯವಾಗಿ ಕನ್ನಡ ಸಾಹಿತ್ಯಕ್ಕೆ ಅತ್ಯಗತ್ಯವಾಗಿ ಬೇಕಾಗಿರುವುದು ಹಲವು ವಿಧದ ಕಾಡುಗಳು. ಅಂಥ ಕಾಡುಗಳನ್ನು ಸೃಷ್ಟಿಸುವ ತಾಕತ್ತು ನಿಸ್ಸಂದೇಹವಾಗಿ ನಮ್ಮೆಲ್ಲರ ಪ್ರೀತಿಯ ಹಳ್ಳಿ ಹೈದ ಕೇಶವರೆಡ್ಡಿ ಹಂದ್ರಾಳು ಅವರಿಗೆ ಖಂಡಿತ ಇದೆ"[2]

ಸಂಸ್ಕೃತಿಯು ಸಮಾಜದ ಒಂದು ರಚನೆಯಾಗಿದೆ. ಲಿಂಗ, ಜಾತಿ, ವರ್ಗ, ಇವೆಲ್ಲವೂ ಒಂದರ ಜೊತೆಗೆ ಮತ್ತೊಂದನ್ನು ಬೇರ್ಪಡಿಸಲು ಆಗದೆ ಜೊತೆಯಾಗಿ ಬೆರೆತಿರುವುದೇ ಸಂಸ್ಕೃತಿಯಾಗಿದೆ. ಇದು ಕಣ್ಣಿಗೆ ಕಾಣುವ ಬದುಕಿನ ಹಂಬಲ, ಪ್ರೇರಣೆ, ಪ್ರಭಾವ ಈ ಘಟನೆಗೆ ಕಾರಣವಾಗಿದೆ ಎಂಬ ಹುಡುಕಾಟವಾಗಿದೆ. ಇಂತಹ ಸಾಹಿತ್ಯಕ್ಕೆ ಪ್ರೇರಣೆ ಪ್ರಭಾವ ಬೀರುತ್ತದೆ. ಜಾತಿ, ಲಿಂಗ, ವರ್ಗದಿಂದ ವ್ಯತ್ಯಾಸವನ್ನು ಸಮಾಜದಲ್ಲಿ ತಿಳಿಯುವುದು. ನಂತರ ಸಂಬಂಧವನ್ನು ತಿಳಿಯುವುದು ಹಾಗೂ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ರೂಪ ಪಡೆಯುತ್ತದೆ. ಭೌತಿಕ ಮತ್ತು

ಮಾನಸಿಕ ಆಕ್ರಮಣದ ಸ್ವರೂಪಗಳನ್ನು ಕನ್ನಡ ಸಂವೇದನೆಯು ಸ್ವೀಕರಿಸಿದ ಮತ್ತು ನಿರಾಕರಿಸಿದ ನೆಲೆಗಳು ಹಾಗೂ ಅಂತಹ ನೆಲೆಗಳನ್ನು ನಮ್ಮ ಅಗತ್ಯಗಳಿಗೆ ಬೇಕಾಗುವಂತೆ ತಿದ್ದಿ ಮಾರ್ಪಡಿಸಿಕೊಂಡ ಪ್ರಕ್ರಿಯೆಯು ಅನನ್ಯವಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಪ್ರಕೃತಿಯ ಸಂಪನ್ಮೂಲಗಳ ನಾಶ, ಕೈಗಾರಿಕೀಕರಣದಿಂದುಂಟಾದ ಅರ್ಥ ವ್ಯವಸ್ಥೆ, ಬಂಡವಾಳಶಾಹಿಯ ಪ್ರಾಬಲ್ಯ, ಜಾತಿ, ಮತ, ವರ್ಗ, ವರ್ಣ ಇವುಗಳ ನಡುವೆ ಉಂಟಾದ ಬಿರುಕುಗಳು ನಮ್ಮ ಕನ್ನಡ ಲೇಖಕರ ಮನಸ್ಸುಗಳನ್ನು ತಟ್ಟಿದವು. ಹೀಗಾಗಿ ಅವರು ಗ್ರಾಮೀಣ ಪರಿಸರವನ್ನು ಹಿಡಿದಿಡಲು ಪ್ರಯತ್ನಿಸಿದರು. ಇದು ವಸಾಹತುಶಾಹಿಗೆ ತೋರಿದ ಪ್ರತಿರೋಧವೆಂಬುದರಲ್ಲಿ ಎರಡು ಮಾತಿಲ್ಲ.

ಹಾಗೆಯೇ ಮಾಸ್ತಿ, ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಈ ರೀತಿಯ ಗ್ರಾಮೀಣ ಸಂವೇದನೆಗಳಿಗೆ ಅಭಿವ್ಯಕ್ತಿ ನೀಡಿರುವುದನ್ನು ಗಮನಿಸಬಹುದು. ಕಾರಂತರ 'ಮರಳಿ ಮಣ್ಣಿಗೆ', ಚಿಗುರಿದ ಕನಸು, ಸ್ವಪ್ನದ ಹೊಳೆ, ಚೋಮನದುಡಿ, ಬೆಟ್ಟದ ಜೀವ ಈ ಕಾದಂಬರಿಗಳಲ್ಲಿ ಬರುವ ಪಾತ್ರಗಳು ಹಳ್ಳಿಗಳ ವಿಶಿಷ್ಟವಾದ ಸುಂದರ ಪರಿಸರದಲ್ಲಿ ನೈಸರ್ಗಿಕ ತಾದಾತ್ಮ್ಯವನ್ನು ಅನುಭವಿಸುತ್ತವೆ. ವಸಾಹತುಶಾಹಿ ಆಗಮನದಿಂದುಂಟಾದ, ಆಧುನಿಕತೆಯಿಂದಾಗಿ ಉಂಟಾದ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತ್ಯಂತರಗಳ ಸಂದರ್ಭದಲ್ಲಿ ಕಳೆದುಹೋಗಿರುವ ಶಾಂತಿ ನೆಮ್ಮದಿಯ ಜೀವನವನ್ನು ಕಂಡುಕೊಳ್ಳುವ ಪ್ರಯತ್ನ ಈ ಕೃತಿಗಳಲ್ಲಿದೆ. ಗ್ರಾಮೀಣ ಜೀವನದ ಆರ್ಥಿಕ ಸ್ಥಿತಿಗತಿಗಳು, ಸಾಮಾಜಿಕ ಪರಿಸ್ಥಿತಿಗಳು, ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳೆಲ್ಲವನ್ನು ವಸಾಹತುಶಾಹಿಗೆ ಪ್ರತಿರೋಧ ವ್ಯಕ್ತಪಡಿಸುವ ರೀತಿಯಲ್ಲಿ ಅನಾವರಣಗೊಳಿಸುತ್ತಾರೆ. ಹಾಗೆಯೇ ಕುವೆಂಪು ಅವರೂ ಸಹ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ', ಮಲೆನಾಡಿನ ಚಿತ್ರಗಳು ಮತ್ತು ಸಣ್ಣಕಥೆಗಳಲ್ಲಿ ವಸಾಹತುಶಾಹಿಯ ಸಂದರ್ಭದ ಗ್ರಾಮೀಣ ಸಮಾಜದ ಸ್ಥಿತ್ಯಂತರಗಳನ್ನು ಕಟ್ಟಿಕೊಡುತ್ತಾರೆ. ಈ ಮೂಲಕ ವಸಾಹತುಶಾಹಿಗೆ ಪ್ರತಿರೋಧವನ್ನು ಒಡ್ಡುತ್ತಾರೆ.

ಹಂದ್ರಾಳರ 'ಹಾರುತಿಹುದು ಏರುತಿಹುದು ನೋಡು ನಮ್ಮ ಬಾವುಟ'ವು ಸ್ವಾತಂತ್ರ್ಯ ಕತೆಯಲ್ಲಿ ಬರುವ ಭಾರತ ಗ್ರಾಮೀಣ ಬದುಕು ಸ್ವಾತಂತ್ರ್ಯ ಬಂದ ನಂತರ ಪಡೆದಿರುವ ವಿಕಾರ ರೂಪದ ನೈಜವರ್ಣನೆ, ಮೂಡಿ ಬಂದಿರುವ ವಿಧಾನವನ್ನು ಕಂಡು ಕತೆಗಾರನ ಮೇಲೆ ಅಭಿಮಾನ ಮೂಡಿದೆ. ಗ್ರಾಮೀಣ ಭಾರತದಿಂದ ಬಂದ, ಸ್ವಾತಂತ್ರ್ಯ ನಂತರ ಭಾರತದ ನೈತಿಕ ನೆಲೆಗಟ್ಟು ಬಿರುಕು ಬಿಡುತ್ತಿರುವುದನ್ನು ಅತೀ ಸೂಕ್ಷ್ಮವಾಗಿ ಗಮನಿಸಲಾಗಿದೆ. ಹಂದ್ರಾಳಗಿರುವ ಭಾರತದ ಭವಿಷ್ಯದ ಬಗೆಗೆ ಇರುವ ಕಳಕಳಿಯು ಈ ಕತೆಯಿಂದ ವ್ಯಕ್ತವಾಗುತ್ತದೆ.

"ಸ್ವತಂತ್ರ ಭಾರತದ ಎಪ್ಪತ್ತೂ ಕೋಟಿಗೂ ಮೀರಿದ ಮಹಾ ಸತ್ಪ್ರಜೆಗಳೇ, ಸ್ವಾತಂತ್ರ್ಯದ ಆಚರಣೆಯ ಗುಂಗಿನಲ್ಲಿರುವ ನಿಮಗೆ ರಾಮನೆಂಬ ಪಾಪದ ಹುಡುಗನೊಬ್ಬನ ಕತೆಯನ್ನು ಹೇಳುತ್ತೇನೆ ಕೇಳಿ, ನನ್ನ ರಾಮ ತ್ರೇತಾಯುಗದ

ಶ್ರೀರಾಮಚಂದ್ರನ ಬಾಲ್ಯಾವಸ್ಥೆಯ ಅಪರಾವತಾರವೇನೂ ಅಲ್ಲ, ಅಥವಾ ಇಥೋಪಿಯಾದ ಭೀಕರ ಕ್ಷಾಮದ ಹಲ್ಲುಗಳಿಗೆ ಸಿಕ್ಕಿಕೊಂಡ ಹುಡುಗನೂ ಅಲ್ಲ, ಏಕೆಂದರೆ ಇಲ್ಲಿ ತಪಸ್ಸಿನಿಂದಲೋ, ಯೋಗದಿಂದಲೋ ಮಳೆ ತರಿಸುವ, ಕೆರೆ ಕಾಲುವೆಗಳನ್ನು ತುಂಬಿಸುವ ಮಹಾಯತಿಗಳಿದ್ದಾರೆ, ತಪಸ್ವಿಗಳಿದ್ದಾರೆ. ಅವರನ್ನು ಬೆಂಬಲಿಸುವ ಮಹಾನಾಯಕರುಗಳಿದ್ದಾರೆ. ಗಾಂಧಿ ಫೋಟೋದ ಹಿಂದೆ ಸಾರಾಯಿ ಬಾಟಲಿ, ಕೊಡಲಿ ಮಚ್ಚುಗಳನ್ನು ಬಚ್ಚಿಟ್ಟು 'ಶಾಂತಿ'ಯ ಬಗ್ಗೆ ಭಾಷಣ ಮಾಡುವ, ರಾತ್ರಿಯಲ್ಲಿ ಅತ್ಯಾಚಾರಗಳನ್ನು ಮಾಡುತ್ತಾ ಅದನ್ನು ಹಗಲು ಪತ್ರಿಕೆಗಳಲ್ಲಿ ಖಂಡಿಸುವ, ದಾರಿದ್ರ್ಯ, ನಿರುದ್ಯೋಗ, ಲಂಚಗುಳಿತನಗಳನ್ನು ಉಗ್ರವಾಗಿ ಟೀಕಿಸುತ್ತಾ ಐಷಾರಾಮಿ ಜೀವನದಲ್ಲಿ ಓಲಾಡುವ ಜನರಿರುವ ಈ ಪುಣ್ಯಭೂಮಿಯ ಅತ್ಯಂತ ಸಾಮಾನ್ಯ ಆದರೂ ಅಪರೂಪದ ಹುಡುಗ ನನ್ನ ರಾಮ. ರಾಮನ ಕತೆಯನ್ನು ಒಂದು ಹಂತದಿಂದ ಶುರು ಮಾಡುತ್ತೇನ. ಕೇಳುವಂತಹರಾಗಿ ನನ್ನ ಸ್ವತಂತ್ರ ಭಾರತದ ಪ್ರಜೆಗಳೇ".[3] ಹಂದ್ರಾಳರು ಈಗಿನ ಸಮಾಜವನ್ನು ಹೇಳುತ್ತಾ ಹೋಗುತ್ತಾರೆ. ಸ್ವಾತಂತ್ರ ಬಂದರೂ ಸಹ ಅನೇಕ ಜನಗಳಿಗೆ ಸ್ವಾತಂತ್ರ್ಯದ ಬೆಳಕು ಸಹ ಅವರಿಗೆ ಬಿದ್ದಿರುವುದಿಲ್ಲ. ನೀಚ ಸಮಾಜದಲ್ಲಿ ದರ್ಪಗಾರಿಕೆ, ಮೋಸಗಾರಿಕೆಗಳು ತಾಂಡವವಾಡುತ್ತವೆ. ಬಡವರು, ನಿರ್ಗತಿಕರು ಸಮಾಜದಲ್ಲಿ ಬದುಕುವುದಕ್ಕೆ ಬಿಡುತ್ತಿಲ್ಲ, ಗಾಂಧಿ ಕೊಟ್ಟ ಸ್ವಾತಂತ್ರ್ಯ ಇಂದು ಬಡವರಿಗೆ ದಕ್ಕುತ್ತಿಲ್ಲವೆನ್ನುವುದು ಹಂದ್ರಾಳರ ಈ ಕತೆಯ ಮೂಲಕ ವ್ಯಕ್ತವಾಗುತ್ತದೆ.

ಸ್ವಾತಂತ್ರ್ಯ ಬಂದ ನಂತರ ತಮ್ಮ ಬದುಕೆಲ್ಲಾ ಸಲೀಸಾಗಿ, ಉಸಿರಾಡಿ ಹೊಟ್ಟೆ ತುಂಬಾ ಉಂಡು, ಮಾನ ಮುಚ್ಚಿಕೊಳ್ಳಲು ಬೇಕಷ್ಟು ಬಟ್ಟೆ, ಲೋಕ ತಿಳಿಯಲು ನಾಲ್ಕಕ್ಷರ ಕಲಿತು ಇಡೀ ಲೋಕದ ಇತರ ಜನರೆಲ್ಲ ಬಾಯಿಮೇಲೆ ಕೈ ಮಡಗಿಕೊಳ್ಳುವಂತೆ ಬದುಕಬಹುದೆಂದು ಕನಸು ಕಂಡಿದ್ದರು. ಆದರೆ ಆದದ್ದೇ ಬೇರೆ! ಸ್ವಾತಂತ್ರ್ಯದ ನೇಕಾರ ಬಡಕಲು ಮೈಯ, ಅರೇ ಮುಚ್ಚಿಕೊಂಡ ಗಾಂಧೀಜಿಯವರಂತೆಯೇ ನಮ್ಮ ಜನರ ಬದುಕು ವಿಷಮಗೊಂಡಿದೆ.

"ರಾಮನಿಗೆ ಧ್ವಜವನ್ನು ಕಂಡರೆ ಎಲ್ಲಿಲ್ಲದ ಹುಚ್ಚು ಪ್ರೀತಿ, ತರಗತಿಯಲ್ಲಿ ಇತಿಹಾಸದ ಮಾಸ್ತರು ಸ್ವಾತಂತ್ರ್ಯದ ಕತೆಗಳನ್ನು ರಸವತ್ತಾಗಿ ಹೇಳುತ್ತಿದ್ದರೆ, ರಾಮ ರೋಮಾಂಚನಗೊಳ್ಳುತ್ತಿದ್ದ, ಭಗತ್‌ಸಿಂಗ್, ರಾಜ್‌ಗುರು, ಸುಖ್‌ದೇವ್ ಮುಂತಾದ ಯುವ ವೀರರು ಬ್ರಿಟೀಷರಿಗೆ ಕೊಟ್ಟ ಕಿರುಕುಳ, ಎಳೆ ವಯಸ್ಸಿನಲ್ಲಿಯೇ ದೇಶಕ್ಕಾಗಿ ಅವರು ಮಾಡಿದ ಪ್ರಾಣತ್ಯಾಗ ಇತ್ಯಾದಿ ರಾಮನಲ್ಲಿ ರಕ್ತ ಕುದಿಸುತ್ತಿತ್ತು. ಆ ಕಾಲದಲ್ಲಿ ಹುಟ್ಟಿದ್ದರೆ ತಾನೂ ಕೂಡ ಬ್ರಿಟೀಷರಿಗೆ ಆ ರೀತಿ ಮಾಡಬಹುದಾಗಿತ್ತು ಎಂದು ಕೈಕೈ ಹಿಸುಕಿಕೊಳ್ಳುತ್ತಿದ್ದ. ಸುಭಾಷ್‌ಚಂದ್ರಬೋಸ್, ಮಹಾತ್ಮಗಾಂಧೀ, ತಿಲಕ್ ಮುಂತಾದವರ ಸಾಹಸಗಳನ್ನು ಕೇಳಿ ಪುಳಕಿತನಾಗಿದ್ದ. ಭಾರತದ ಈ ತ್ರಿವರ್ಣ ಧ್ವಜ ಹಾರಾಡಬೇಕಾದರೆ ಎಷ್ಟು ಜನ ಪ್ರಾಣತ್ಯಾಗ ಮಾಡಿದ್ದಾರೆ ಎನ್ನುವ ಅರಿವು ಪುಟ್ಟರಾಮನ ಹೃದಯಕ್ಕೆ ಬಂದಿತ್ತು. ಆದ್ದರಿಂದಲೇ ಅವನಿಗೆ ಧ್ವಜವನ್ನು ಕಂಡರೆ ಎಲ್ಲಿಲ್ಲದ ಪ್ರಾಣ, ದನಗಳನ್ನು ಮೇಯಿಸಲು ಹೋದಾಗಲೋ, ಕಟ್ಟೆಗೆ ಹೋದಾಗಲೋ ರಾಮ ತನ್ನ

ಗೆಳೆಯರೊಡನೆ ಸ್ವತಂತ್ರದ ಸಾಹಸ ನಾಟಕಗಳನ್ನು ಆಡುತ್ತಿದ್ದ. ತಾನು ಭಗತ್‌ಸಿಂಗ್‌ನಾಗಿಯೋ, ಸುಭಾಷ್‌ಚಂದ್ರಬೋಸ್ ಆಗಿಯೋ ಪಾತ್ರಗಳನ್ನು ಕಟ್ಟುತ್ತಿದ್ದ. ಎಷ್ಟೋ ಸಾರಿ ಸ್ವತಂತ್ರದ ಘೋರ ಕನಸುಗಳು ರಾಮನಿಗೆ ಬಿದ್ದದ್ದುಂಟು. ರಾಮ ಕನಸುಗಳಲ್ಲಿ ಬ್ರಿಟೀಷರ ಗುಂಡಿಗೆ ಬಲಿಯಾಗಿದ್ದುಂಟು. ಅಂತಹ ಕನಸುಗಳು ತನಗೆ ಮತ್ತೆ ಮತ್ತೆ ಬೀಳಲೆಂದು ರಾಮ ಆಶಿಸುತ್ತಿದ್ದ".[4] ಹೀಗೆ ರಾಮನಿಗೆ ದೇಶದ ಮೇಲೆ ಅಭಿಮಾನ ಹೆಚ್ಚಾಗಿತ್ತು. ಅನ್ಯಾಯವನ್ನು ಪ್ರತಿಭಟಿಸುತ್ತಿದ್ದ, ಚಿಕ್ಕವನಾಗಿದ್ದರೂ ಅವನಿಗೆ ಇದ್ದ ದೇಶದ ಮೇಲೆ ಹಾಗೂ ಬಾವುಟದ ಮೇಲೆ ಆಗಾಧವಾದ ಅಭಿಮಾನ ಇಟ್ಟುಕೊಂಡಿದ್ದನು. ಸ್ವಾತಂತ್ರ್ಯ ದಿನಾಚರಣೆಯಲ್ಲಿ ರಾಮನು ಪಾಲ್ಗೊಂಡು ದೇಶಕ್ಕೆ ಹಾಗೂ ಬಾವುಟಕ್ಕೆ ಮರ್ಯಾದೆಯನ್ನು ನೀಡಬೇಕೆಂದು ಬಹಳ ಉತ್ಸುಕತೆಯಿಂದ ಇದ್ದನು.

ಈ ಕತೆಯಲ್ಲಿ ಬರುವ ರಾಮನ ಚಿತ್ರಣ, ಈ ಮುಗ್ಧ ರಾಮನನ್ನು ಹೈಸ್ಕೂಲ್‌ನ ಹೆಡ್‌ಮಾಸ್ತರ್ ನಾಗಯ್ಯ ನಡೆಸಿಕೊಳ್ಳುವ ರೀತಿ ರಾಮನ ಮೇಲೆ ದಟ್ಟವಾದ ಪರಿಣಾಮವು ಬೀರಿದೆ. ಯೂನಿಫಾರಂ ಪಡೆದುಕೊಳ್ಳಲು ರಾಮನ ಬಯಕೆ ಮಣ್ಣಾಗುತ್ತದೆ. ಬಡತನ ಅನ್ನುವುದು ಕಾಣುತ್ತದೆ. ಮೇಲ್ವರ್ಗದವರ ದಬ್ಬಾಳಿಕೆ, ಶೋಷಣೆ, ಮುಗ್ಧರಾಮ ಯೂನಿಫಾರಂ ಪ್ರಸಂಗವು ಕತೆಯಲ್ಲಿ ಸ್ಪಷ್ಟವಾಗಿ ರೂಪುಗೊಂಡಿದೆ. ರಾಮುವಿಗೆ ಆಕ್ರೋಶ ಭುಗಿಲೆದ್ದು ಸಂಕರಜ್ಜಿಯ ಮಗಳು ಚೆಲುವಿಯ ಮೇಲೆ ಹೆಡ್‌ಮಾಸ್ತರ್ ಮತ್ತು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಅವಳನ್ನು ಅತ್ಯಾಚಾರವೆಸಗುತ್ತಿದ್ದರ ವಿರುದ್ಧ ಧ್ವಜದ ಕಂಬಕಿತ್ತು ಪ್ರೆಸಿಡೆಂಟರಿಗೆ ಹೊಡೆಯುವುದು ಹಾಗೂ ಪ್ರತಿಭಟಿಸುವ ಗುಣವನ್ನು ಈ ಕತೆಯಲ್ಲಿ ಕಾಣಲಾಗುತ್ತದೆ. ಬಡ ಜನಾಂಗದಲ್ಲಿ ಜನ್ಮವೆತ್ತಿದ ಏಕೈಕ ತಮ್ಮದಲ್ಲದ ತಪ್ಪಿಗಾಗಿ ಮಹಿಳೆಯರು, ಪುರುಷರ, ಮಕ್ಕಳು ಸಮ ಸಮವಾಗಿಯೇ ದಬ್ಬಾಳಿಕೆ ಸದ್ದಿಲ್ಲದೇ ಮೈಮನಗಳನ್ನು ಒಡ್ಡಿ ವಿಲವಿಲ ಒದ್ದಾಡುತ್ತಿದ್ದಾರೆ. ಒಮ್ಮೊಮ್ಮೆ ಇವರು ಪ್ರತಿಭಟಿಸಿದರೂ ಈ ಪ್ರತಿಭಟನೆ ಎಲ್ಲೋ ಒಮ್ಮೊಮ್ಮೆ ಒಂದು ಸುದ್ದಿಯಾಗಿ, ಒಂದಿಷ್ಟು ದಿನಗಳು ಕುತೂಹಲಕಾರಿ ಮನಸ್ಸುಗಳನ್ನು ತಟ್ಟಿ ಸುಮ್ಮನಾಗಿಬಿಡುತ್ತದೆ. ಒಂಟಿಹುಲ್ಲಿನ ಮೆದೆಗೆ ಬೆಂಕಿ ಬಿದ್ದು ಬೆಂದು ಹೋದ ಹಾಗೆ ಕತೆಯು ನಿಲ್ಲುತ್ತದೆ.

ಮಾಸ್ತಿ, ಕುವೆಂಪು, ಕಾರಂತರು ಕಥೆ, ಕಾದಂಬರಿಗಳ ಮೂಲಕ ವಸಾಹತು ಸಂದರ್ಭದ ಗ್ರಾಮೀಣ ಸ್ಥಿತ್ಯಂತರಗಳನ್ನು ಅನಾವರಣಗೊಳಿಸಿ ವಸಾಹತುಶಾಹಿಗೆ ಪ್ರತಿರೋಧ ಒಡ್ಡಿದರೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಪ್ರಬಂಧಗಳ ಮೂಲಕ ಹಳ್ಳಿ ಚಿತ್ರಗಳನ್ನು ಕಟ್ಟಿಕೊಡುವುದರ ಮೂಲಕ ಪ್ರತಿರೋಧವನ್ನು ಒಡ್ಡುತ್ತಾರೆ. ಗೊರೂರರ 'ನಮ್ಮ ಊರಿನ ರಸಿಕರು' ಹಳ್ಳಿ ಚಿತ್ರಗಳು, ಪೂರ್ಣವಾಗಿ ಗ್ರಾಮವನ್ನು ಕುರಿತ ಚಿತ್ರಗಳೇ ಆಗಿವೆ. ಕುವೆಂಪು ಅವರ 'ಮಲೆನಾಡಿನ ಚಿತ್ರಗಳು', ಆಯಾ ಗ್ರಾಮದ ಜನತೆ, ಹೊಲಗದ್ದೆ, ಪೈರು, ದೇವಾಲಯಗಳು, ಸುಂದರವಾದ ಬದುಕು ಇವೆಲ್ಲವನ್ನು ಹೇಳುತ್ತಾ ವಸಾಹತುಶಾಹಿಯ ಆಕ್ರಮಣಿಕೆಯ ಸ್ವರೂಪವನ್ನು, ಅದರ ಕ್ರೌರ್ಯವನ್ನು ಬಯಲು ಮಾಡುತ್ತಾ ಹೋಗುತ್ತದೆ. ಇದೇ ರೀತಿ ಕೇಶವರೆಡ್ಡಿಯವರು

ಹಳ್ಳಿಯ ಜನರ ಬದುಕು ಬವಣೆ, ಜೀವನೋತ್ಸಾಹಗಳ ಮೂಲಕ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತ್ಯಂತರಗಳನ್ನು ಅನಾವರಣಗೊಳಿಸುತ್ತಾ, ಜಾಗತೀಕರಣಕ್ಕೆ ಪ್ರತಿರೋಧವನ್ನು ಒಡ್ಡುವ ಬಗ್ಗೆ ಯೋಚಿಸುವಂತೆ ಮಾಡುತ್ತದೆ.

ಜಾಗತೀಕರಣದ ಈ ಸಂದರ್ಭದಲ್ಲಿ ಪ್ರಕೃತಿಯ ಸಂಪನ್ಮೂಲಗಳು ಬಲಾಢ್ಯ ರಾಷ್ಟ್ರಗಳ ವಶವಾಗುತ್ತಿವೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳಿಂದಾಗಿ ಮಾನವ ಸಮಾಜದ ಎಲ್ಲ ಸಂಬಂಧಗಳೂ ಮಾರುಕಟ್ಟೆಯ ಸ್ವರೂಪ ಪಡೆದುಕೊಳ್ಳುತ್ತಿವೆ. ಗ್ರಾಮೀಣ ಪ್ರದೇಶಗಳು ಮಾನವೀಯತೆಗೆ, ಮಾನವ ಸಂಬಂಧಗಳಿಗೆ ಮುಖ್ಯವಾದ ಸ್ಥಾನ ಮತ್ತು ಆದ್ಯತೆಯನ್ನು ನೀಡುತ್ತಿದ್ದವು. ಆದರೆ, ಜಾಗತೀಕರಣದ ಪ್ರಭಾವದಿಂದ ಮಾನವ ಸಂಬಂಧಗಳು ಆರ್ಥಿಕ ಸ್ಥಿತಿಗತಿಗಳನ್ನು ಅವಲಂಬಿಸಿ ನಿರ್ಧಾರವಾಗುತ್ತಿವೆ. ಇಂದು ಮಾರುಕಟ್ಟೆಯೇ ಎಲ್ಲ ಸಂಬಂಧಗಳನ್ನು ನಿಯಂತ್ರಿಸುವಂತಾಗಿದೆ. ಬಂಧು, ಬಳಗ, ಅಣ್ಣ, ತಮ್ಮ, ಅಕ್ಕ, ತಂಗಿ, ತಂದೆ, ಮಕ್ಕಳು, ತಾಯಿ ಇವೆಲ್ಲರ ಮಧ್ಯೆ ಇದ್ದ ಸಂಬಂಧಗಳು ಮಾರುಕಟ್ಟೆಯ ಸಂಬಂಧಗಳಾಗಿ ಪರಿವರ್ತಿತವಾಗುತ್ತಿವೆ. ಮನುಷ್ಯತ್ವಕ್ಕೆ ಬೆಲೆಯೇ ಇಲ್ಲವಾಗಿದೆ. ಮನುಷ್ಯ ಸಂಬಂಧಗಳನ್ನು ಹಾಳು ಮಾಡಿರುವ ಈ ಜಾಗತೀಕರಣ ಜನತೆಯ ಗ್ರಾಮೀಣ ಸಂಸ್ಕೃತಿಯನ್ನು ಹಾಳು ಮಾಡುತ್ತಿದೆ. ಜನರನ್ನು ಅಪಮೌಲ್ಯಗೊಳಿಸುತ್ತಿದೆ. ಅವರ ಕಲೆ, ನೃತ್ಯ, ಧರ್ಮ, ಶಿಕ್ಷಣ, ಸಾಹಿತ್ಯ, ಜಾನಪದ ಎಲ್ಲವನ್ನೂ ಹೀನಾಯ ಮಾಡುತ್ತಿದೆ. ಜನರ ಹಳ್ಳಿಗಾಡಿನ ಭಾಷೆಯನ್ನು ನಾಶ ಮಾಡುತ್ತಿದೆ ಎಂದು ಹೇಳಲಾಗಿದೆ.

**ಕೊನೆ ಟಿಪ್ಪಣಿಗಳು:**

1. ಸುರೇಶ ಪಾಟೀಲ, ಒಂದು ಹಿಡಿಮಣ್ಣು, ಪು.ಸಂ. 08
2. ಕೇಶವರೆಡ್ಡಿ ಹಂದ್ರಾಳ, ಬಾರಕ್ಕ ಬೆಳದಿಂಗಳೆ, ಪು.ಸಂ. 14
3. ಕೇಶವರೆಡ್ಡಿ ಹಂದ್ರಾಳ, ಹಂದ್ರಾಳ, ಪು.ಸಂ. 12
4. ಕೇಶವರೆಡ್ಡಿ ಹಂದ್ರಾಳ, ಹಂದ್ರಾಳ, ಪು.ಸಂ. 15